ಇದಕ್ಕೆ ಕಾರಣ, ಮ್ಯೂನಿಕ್‌ನಲ್ಲಿ ಶೇಕಡಾ ಮೂವತ್ತರಷ್ಟು ಜನ ಹೊರದೇಶದವರು– ಯೂರೋಪಿಯನ್ಸ್, ಏಶಿಯನ್ಸ್, ಆಫ್ರಿಕನ್ಸ್, ಅಮೆರಿಕನ್ಸ್. ಜರ್ಮನಿಯ ಬೇರೆ ಭಾಗಗಳಿಂದ ವಲಸೆ ಬಂದವರೂ ಇದ್ದಾರೆ. ಇಲ್ಲೇ ಹುಟ್ಟಿ ಬೆಳೆದವರ ಸಂಖ್ಯೆ ಸ್ವಲ್ಪ ಕಮ್ಮಿ. ಈ ನಗರಕ್ಕೊಂದು ಮುಕ್ತ ಸಾಮಾಜಿಕ ವಾತಾವರಣವಿದೆ. ಸುಮಾರು ಜನರು ಮ್ಯೂನಿಕ್ ಮತ್ತು ಹತ್ತಿರದ ಊರುಗಳಲ್ಲಿ ಇದ್ದಾರೆ. ಚೆನ್ನಾಗಿದ್ದಾರೆ. ಕೆಲವರಿಗೆ ಸ್ವಂತ ಅಂಗಡಿಗಳಿವೆ. ಉಪ್ಪಿನಕಾಯಿ, ಬೆಂಡೆಕಾಯಿ ಎಲ್ಲಾ ಸಿಗುತ್ತದೆ. ಪ್ರತಿ ಐದನೇ ಬೀದಿಗೆ ಒಂದು ಇಂಡಿಯನ್ ರೆಸ್ಟೋರೆಂಟ್ ಇದೆ.

◆ **ಬೂದಾಳು: ನೀವು ಭಾರತವನ್ನು ಸಂಸ್ಕೃತದ ಕಣ್ಣಲ್ಲೂ ದೇಶಭಾಷೆಗಳ ಮೂಲಕವೂ ನೋಡಿದವರು. ಈ ಎರಡೂ ಭಾರತಗಳ ನಡುವೆ ಸಾಂಸ್ಕೃತಿಕವಾದ ಸಂಘರ್ಷಗಳಿವೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಯಬೇಕಿತ್ತು.**

ಈ ಸಾಂಸ್ಕೃತಿಕ ಸಂಘರ್ಷ ನನ್ನ ದೃಷ್ಟಿಯಿಂದ ಕೃತಕ. ಪ್ರಾಯಃ ಇತ್ತೀಚಿನದು. ನಾನು ಮಾಡಿದ ಆಧುನಿಕರಣದ ಮೇಲಿನ ಸಂಶೋಧನೆ ಹೀಗೆ ಹೇಳಲು ಕಾರಣ. ಕಳೆದ 60–70 ವರ್ಷಗಳಲ್ಲಿ ಇಂಡಿಯಾದ ರಾಜಕೀಯ, ಸಾಮಾಜಿಕ, ಆರ್ಥಿಕ, ತಾಂತ್ರಿಕ, ಶೈಕ್ಷಣಿಕ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿ ವಿಪರೀತ ವೇಗದಲ್ಲಿ ಬದಲಾವಣೆ ಆಗಿವೆ. ಮತ್ತು ಇಡೀ ಜೀವನ ಬದಲಾಗಿದೆ. ನಾನು ಇಂಡಿಯಾಕ್ಕೆ ಬಂದಾಗ ಮೈಸೂರು ದೊಡ್ಡಹಳ್ಳಿ ತರಹ ಇತ್ತು. ಈಗ ದೊಡ್ಡ ನಗರವಾಗಿದೆ. ಬೆಂಗಳೂರು ಸುಂದರವಾದ ಪ್ರಶಾಂತವಾದ ನಗರ. ಗಾರ್ಡನ್ ಸಿಟಿ ಆಫ್ ಇಂಡಿಯಾ. ಈಗ ಹಾಗಿಲ್ಲ. ವಿದ್ಯುತ್ ತೊಂದರೆ, ನೀರಿನ ತೊಂದರೆ ಇದೆ. ಯಾಕೆಂದರೆ, ಅಷ್ಟು ಜನ ಹಳ್ಳಿಗಳಿಂದ ಬಂದಿದ್ದಾರೆ. ಗ್ರಾಮೀಣ ಪರಿಸರವನ್ನು ಬಿಟ್ಟು ನಗರಕ್ಕೆ ಬಂದಮೇಲೆ ಜನರ ಹಳೆಯ ಸಾಮಾಜಿಕ ಸಂಬಂಧಗಳು ಶಿಥಿಲವಾಗಿವೆ. ಹಳೆಯ ಕಾಲದಲ್ಲಿ ಪ್ರತಿಯೊಬ್ಬರಿಗೆ ಒಂದು ಸ್ವಂತ ಜಾಗವಿತ್ತು. ಆ ಜಾಗ ಅವರಿಗೆ ಗೊತ್ತಿತ್ತು. ಒಂದು ರೀತಿಯ ಭದ್ರತೆ ಇತ್ತು. ಈ ಭದ್ರತೆ ಈಗ ಕಳೆದುಹೋಗಿದೆ. ಇದೊಂದು ಜಾಗತಿಕ ಸಮಸ್ಯೆ. ಆದರೆ, ಇಂಡಿಯಾದಂತಹ ದೇಶದಲ್ಲಿ ಅದು ಇನ್ನೂ ಜೋರು ಮತ್ತು ಅದು ಹೆಚ್ಚು ನೋಯಿಸುತ್ತದೆ. ಇಂತಹ ಮಾನಸಿಕ ನೋವನ್ನು ನಿವಾರಿಸುವುದಕ್ಕೆ, ಭದ್ರತೆ ಪಡೆದುಕೊಳ್ಳುವುದಕ್ಕೆ, ಜನ ಯಾವುದೊ ಸಂಕುಚಿತ ಧಾರ್ಮಿಕ ಜಾತಿಯ ಐಡೆಂಟಿಟಿ ಹಿಡಿದುಕೊಳ್ಳುತ್ತಾರೆ. ಎಷ್ಟು ಬದಲಾದರೂ ನಾನು ಇಂಥ ಜಾತಿಯವನು ಅನ್ನೋದು ಕನಿಷ್ಠ ಉಳಿದಿದೆ. ಮನುಷ್ಯನಿಗೆ ಸೋಶಿಯಲ್ ಐಡೆಂಟಿಟಿ ಬೇಕು ಸರಿ. ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಅದರಲ್ಲಿ ಒಂದು ಕೃತಕವಾದ ಕೆಟ್ಟ ಬಿಗುವು ಉಂಟಾಗಿದೆ. ಹಳಗನ್ನಡ ಸಾಹಿತ್ಯ, ಹಳೆ ಸಂಸ್ಕೃತ ಸಾಹಿತ್ಯ ಓದಿದರೆ, ಅಲ್ಲಿ ಅಂತಹ ಟೆನ್ಷನ್ ಕಾಣಿಸೋಲ್ಲ. ಈ ಸೋಶಿಯಲ್ ಟೆನ್ಶನ್ ಹೊಸದು. ನೀವು ಸಂಸ್ಕೃತದೃಷ್ಟಿ– ಕನ್ನಡದ ದೃಷ್ಟಿ ಅಂದಿರಿ. ಸಂಸ್ಕೃತ ದೃಷ್ಟಿ ಎಂದರೇನು? ಈಗ ಇಂಡಿಯಾದಲ್ಲಿ ಯಾರೊಬ್ಬರನ್ನು ಹಿಡಿದು ಕೇಳಿದರೆ ಪ್ರಾಯಶಃ 'ಓ ಸಂಸ್ಕೃತ ಅಂದರೆ ಬ್ರಾಹ್ಮಣರ ಭಾಷೆ' ಅನ್ನಬಹುದು. ಆದರೆ, ಬೌದ್ಧರು ಜೈನರು ಎಷ್ಟು ಸಂಸ್ಕೃತ ಸಾಹಿತ್ಯ ಬರೆದಿದ್ದಾರೆ? ಹಾಗಾದರೆ ಸಂಸ್ಕೃತದೃಷ್ಟಿ ಅಂದರೆ ಯಾರದು? ಜೈನರದೊ, ಬೌದ್ಧರದೊ, ಬ್ರಾಹ್ಮಣರದೋ? ಯಾವ ಬ್ರಾಹ್ಮಣರದು? ವೀರಶೈವ ಬ್ರಾಹ್ಮಣರು ಅಂತಿದಾರೆ. ಅವರ ಸಾಹಿತ್ಯ ಸಂಸ್ಕೃತದಲ್ಲಿದೆ. ಸಾಹಿತ್ಯದಲ್ಲಿ ಎಲ್ಲರೂ ಸಂಸ್ಕೃತವನ್ನು ಬಳಸಿದರು. ಇದಕ್ಕೆ ಸಾಮಾಜಿಕ ಐತಿಹಾಸಿಕ ಕಾರಣಗಳಿವೆ. ಇತ್ತೀಚೆಗೆ ಸಂಸ್ಕೃತ ಬ್ರಾಹ್ಮಣರ ಭಾಷೆ ಆಗಿರಬಹುದು. ಆದರೆ, ಹಿಂದಿನ ಕಾಲದಲ್ಲಿ ಹಾಗೆ ಇರಲಿಲ್ಲ. ಅದು ಎಲ್ಲ ವಿದ್ವಾಂಸರ ಭಾಷೆಯಾಗಿತ್ತು. ಮುಸ್ಲಿಂ ಸಂಸ್ಕೃತ ಪುರಾಣಗಳೂ ಉಂಟು. ಸಂಸ್ಕೃತ ಅಷ್ಟು ಸಾರ್ವತ್ರಿಕ ಆಗಿತ್ತು. ಈಗ ಬದಲಾಗುತ್ತಿರುವ ಹೊಸ ಸಾಮಾಜಿಕ ರಾಜಕೀಯ ಪರಿಸ್ಥಿತಿಯಲ್ಲಿ ಇಂಥ ಪೋಲರೈಜೇಶನ್ ಸೃಷ್ಟಿಯಾಗಿವೆ.